


# ಅತಿ ಉದ್ದನೆಯ ವಿಮಾನ!

ಪ್ರಪಂಚದ ಅತಿ ಉದ್ದನೆಯ ವಿಮಾನ ಎಂಬ ಅಗ್ಗಳಿಕೆಗೆ 'ಏರ್‌ಲ್ಯಾಂಡರ್ 10' ವಾಯು ವಿಮಾನ ಪಾತ್ರವಾಗಿದೆ.

ಇದು ಅರ್ಧ ವಿಮಾನ ಮತ್ತು ಇನ್ನರ್ಧ ವಾಯುವಿಮಾನದಂತೆ ಇರುವುದರಿಂದ ಇದಕ್ಕೆ 'ಏರ್‌ಲ್ಯಾಂಡರ್ 10' ಎಂದು ಹೆಸರಿಡಲಾಗಿದೆ. ಬ್ರಿಟನ್ನಿನ ಕಾರ್ಡಿಂಗ್ಟನ್ ನಿಲ್ದಾಣದಿಂದ ಏರಿದ ವಿಮಾನವು ಮೊದಲ ಪ್ರಾಯೋಗಿಕ ಯಾನ ಆರಂಭಿಸಿ, 30 ನಿಮಿಷಗಳ ಕಾಲ ಯಶಸ್ವಿಯಾಗಿ ತೇಲಾಡಿ ನೋಡುಗರನ್ನು ಆಕರ್ಷಿಸಿತು.

ಈ ವಿಮಾನದ ವಿಶೇಷತೆ ಎಂದರೆ ಜನರಿಲ್ಲದೆ 2 ವಾರ ಮತ್ತು ಮಾನವ ಸಹಿತ 5 ದಿನಗಳ ಕಾಲ ಆಕಾಶದಲ್ಲಿ ತೇಲಾಡುವ ಸಾಮರ್ಥ್ಯ ಹೊಂದಿದೆ. ಈ ವಿಮಾನದ ತಂತ್ರಜ್ಞಾನವು ಹೆಲಿಕ್ಯಾಪ್ಟರ್ ತಂತ್ರಜ್ಞಾನಕ್ಕಿಂತ ಅಗ್ಗ ಮತ್ತು ಪರಿಸರ ಸ್ನೇಹಿಯಾಗಿದೆ. ಪ್ರಯಾಣಿಕರನ್ನು ಹೊತ್ತೊಯ್ಯುವುದಕ್ಕಲ್ಲದೆ, ಸಂವಹನ, ಸರಕು ಸಾಕಾಣೆ ಉದ್ದೇಶಕ್ಕೂ ಬಳಸಬಹುದು. ಈ ವಾಯು ವಿಮಾನವು ಹಾರಲು ಮತ್ತು ಧರೆಗಿಳಿಯಲು ಕಡಿಮೆ ಸ್ಥಳಾವಕಾಶ ಸಾಕು. ಅಲ್ಲದೆ ಮರುಭೂಮಿ, ಮಂಜುಗಡ್ಡೆ, ನೀರಿನ ಮೇಲೂ ಇಳಿಯಬಲ್ಲದು.

ಬಲೂನಿನ ರೀತಿಯ ದೇಹದಲ್ಲಿ ಗಾಳಿಗಿಂತ ಹಗುರವಾಗದ ಅನಿಲವನ್ನು (ಹೀಲಿಯಂ, ಜಲಜನಕ) ತುಂಬಿಕೊಂಡು ಆಕಾಶದಲ್ಲಿ ತೇಲಾಡುವ ವಿಮಾನವಿದು. 13 ಲಕ್ಷ ಘನ ಅಡಿಗಳಷ್ಟು ಹೀಲಿಯಂ ಅನ್ನು ವಿಮಾನದಲ್ಲಿ ತುಂಬಲಾಗಿದೆ.

ವಿಮಾನ 92 ಮೀಟರ್ ಉದ್ದವಿದ್ದು, ಗಂಟೆಗೆ 140 ಕಿ.ಮೀ ವೇಗದಲ್ಲಿ ಹಾರುತ್ತದೆ. 50 ಟನ್ ಭಾರ ಹೊರಬಲ್ಲುದು. ಅಂದರೆ ಹೆಲಿಕ್ಯಾಪ್ಟರ್ ಗಿಂತ 50 ಪಟ್ಟು ಹೆಚ್ಚು ಸಾಮರ್ಥ್ಯ ಹೊಂದಿದೆ. ಬ್ರಿಟನ್‌ನ ಹೈಬ್ರಿಡ್ ಏರ್‌ವೆಹಿಕಲ್ ಸಂಸ್ಥೆಯು ಈ ಏರ್‌ಲ್ಯಾಂಡ್ 10 ವಿಮಾನವನ್ನು ನಿರ್ಮಿಸಿದೆ. ಆಗಸ್ಟ್ 24 ರಂದು ಈ ವಿಮಾನ ಎರಡನೇ ಬಾರಿ ನಭಕ್ಕೆ ಹಾರಿತು, ಇಳಿಯುವಾಗ ವಿಮಾನದ ಮುಂಭಾಗ ನೆಲಕ್ಕೆ ಅಪ್ಪಳಿಸಿ ಜಖಂಗೊಂಡಿದೆ. ಪೈಲಟ್‌ಗೆ ಯಾವುದೇ ತೊಂದರೆ ಆಗಿಲ್ಲ.

■ ನಿಸರ್ಗ

